ಹಸಿದು ಬಂದವರಿಗೆ ಅನ್ನ ಹಾಕಿ ಅತಿಥಿ ಧರ್ಮ ಪಾಲಿಸುತ್ತಿದ್ದರು. ಒಂದು ದಿನ ಬೆಳಗ್ಗೆ ಗಂಡ ತನ್ನ ಕೆಲಸಕ್ಕೆಂದು ಹೋದ ಮೇಲೆ ಹೆಂಡತಿ ಕೈತೋಟದ ಗಿಡಗಳಿಗೆ ನೀರು ಹಾಕುತ್ತಿದ್ದಳು. ಆಗ ಅವಳಿಗೆ ಅವರ ಮನೆಯ ಎದುರಿಗಿದ್ದ ಮುರುಕು ಮನೆಯಲ್ಲಿ ಮೂವರು ವೃದ್ಧರು ಕುಳಿತಿರುವುದು ಕಣ್ಣಿಗೆ ಬಿತ್ತು.

ಅವಳು ಅವರಲ್ಲಿಗೆ ಹೋಗಿ, ''ನೀವು ಹಸಿದಿರುವಂತೆ ತೋರುತ್ತದೆ. ನಮ್ಮ ಮನೆಗೆ ಬಂದು ಊಟ ಮಾಡಿ'' ಎಂದಳು.

ಆಗ ಅವರಲ್ಲೊಬ್ಬ, ''ನಿನ್ನ ಯಜಮಾನರು ಮನೆಯಲ್ಲಿದ್ದಾರೆಯೇ?'' ಎಂದು ಕೇಳಿದ.

''ಇಲ್ಲ. ಅವರು ಕೆಲಸಕ್ಕೆ ಹೋಗಿದ್ದಾರೆ. ಸಾಯಂಕಾಲ ವಾಪಸ್ಸು ಬರುತ್ತಾರೆ'' ಎಂದಳು.

''ನಾವು ಸಾಯಂಕಾಲ ಬರುತ್ತೇವೆ. ಈಗ ಬರುವುದಿಲ್ಲ'' ಎಂದರು.

ಅವಳು ಸಾಯಂಕಾಲ ಗಂಡ ಬಂದನಂತರ ಆ ಮೂವರು ವೃದ್ಧರ ವಿಚಾರ ತಿಳಿಸಿದಳು.

''ನಾನು ಮನೆಗೆ ಬಂದಿದ್ದೀನಲ್ಲಾ? ನೀನು ಹೋಗಿ ಅವರನ್ನು ಕರೆದುಕೊಂಡು ಬಾ'' ಎಂದ.

ಅವಳು ಆ ಮೂವರು ವೃದ್ಧರನ್ನೂ ತನ್ನ ಮನೆಗೆ ಆಹ್ವಾನಿಸಿದಳು.

''ನಮ್ಮಲ್ಲಿ ಒಬ್ಬರು ಮಾತ್ರ ನಿಮ್ಮನೆಗೆ ಬರಲು ಸಾಧ್ಯ. ನೀನು ನಮ್ಮಲ್ಲಿ ಒಬ್ಬನನ್ನು ಆರಿಸು'' ಎಂದರು.

ಅವಳು ಕೊಂಚ ಗೊಂದಲಕ್ಕೊಳಗಾದಳು.

''ನಾನು ಸಂಪತ್ತು. ನನ್ನ ಬಲ ಪಕ್ಕ ಕುಳಿತಿರುವವನು ಯಶಸ್ಸು. ನನ್ನ ಎಡಪಕ್ಕ ಕುಳಿತಿರುವವನು ಪ್ರೀತಿ. ನಿನಗೆ ಯಾರು ಬೇಕೋ ನಿನ್ನ ಯಜಮಾನನೊಂದಿಗೆ ಚರ್ಚಿಸಿ ಆರಿಸಿಕೋ'' ಎಂದ ಒಬ್ಬ ವೃದ್ಧ.

ಅವಳು ಗಂಡನಿಗೆ ವಿಷಯ ತಿಳಿಸಿದಳು.

''ಹಾಗಾದರೆ ನಾವು ಸಂಪತ್ತನ್ನು ಆರಿಸೋಣ'' ಎಂದ ಗಂಡ.

''ಬೇಡ ಬೇಡ ನಾವು ಯಶಸ್ಸನ್ನು ಆರಿಸೋಣ'' ಎಂದಳು ಹೆಂಡತಿ.

ಅವರ ಮಾತು ಕೇಳುತ್ತಾ ಕುಳಿತಿದ್ದ ಮಗಳು, ''ನಮಗೆ ಸಂಪತ್ತು, ಯಶಸ್ಸು ಎರಡೂ ಬೇಡ. ನಾವು ಪ್ರೀತಿಯನ್ನು ಆಹ್ವಾನಿಸೋಣ'' ಎಂದಳು.

ತಂದೆತಾಯಿ ಒಪ್ಪಿದರು. ಆಗ ಆ ಗೃಹಿಣಿ ಹೋಗಿ ಪ್ರೀತಿಗೆ ಆಹ್ವಾನ ನೀಡಿದಳು. ಪ್ರೀತಿಯನ್ನು ಸಂಪತ್ತು, ಯಶಸ್ಸು ಹಿಂಬಾಲಿಸಿದವು.

ಆಗ ಆ ಮಗು ಅವರನ್ನು ತಡೆದು ಹೇಳಿತು: ''ನಾವು ಪ್ರೀತಿಯನ್ನು ಮಾತ್ರ ಆಹ್ವಾನಿಸಿದ್ದೇವೆ. ನಿಮ್ಮನ್ನು ಆಹ್ವಾನಿಸಿಲ್ಲ.''

''ಎಲ್ಲಿ ಪ್ರೀತಿ ಇರುವುದೋ ಅಲ್ಲಿ ಸಂಪತ್ತು, ಯಶಸ್ಸು ಇದ್ದೇ ಇರುತ್ತದೆ. ನೀವು ಸಂಪತ್ತು ಅಥವಾ ಯಶಸ್ಸನ್ನು ಆಯ್ಕೆ ಮಾಡಿದ್ದರೆ ನೀವು ಕೋರಿದ್ದು ಮಾತ್ರ ಸಿಗುತ್ತಿತ್ತು. ನೀವು ಪ್ರೀತಿಯನ್ನು ಆಯ್ಕೆ ಮಾಡಿದ್ದರಿಂದ ಎಲ್ಲವೂ ಸಿಕ್ಕಿತು'' ಎನ್ನುತ್ತಾ ಆ ಮೂವರು ವೃದ್ಧರೂ ಮನೆಯ ಒಳಗೆ ಪ್ರವೇಶಿಸಿದರು.

ತಂದೆತಾಯಿ ಮಗಳ ಆಯ್ಕೆಯನ್ನು ಮೆಚ್ಚಿ ಅವಳನ್ನು ಕೊಂಡಾಡಿದರು.